೫) ೧೦ ವರ್ಷ ೮ ತಿಂಗಳು

ನಗರಪಾಲಿಕೆಯ ಆರ್ಥಿಕ ಮಂಗ್ಗಟ್ಟಿನಿಂದ ಬಾಕಿ ಉಳಿದಿದೆ.

೧೯೭೩–೭೪ ರಿಂದ ೧೯೮೩–೮೪ ರವರೆಗೆ ಪಾವತಿ ಮಾಡಿದ ಹಣ ರೂ. ೩,೧೨,೯೯,೭೮೪–೧೫.

ಈ) ಕರ್ತವ್ಯ ಲೋಪ ಕಂಡುಬರುವುದಿಲ್ಲ.

ಉ) ಕ್ರಮ ಉದ್ಭವಿಸುವುದಿಲ್ಲ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ಮಾನ್ಯ ಅಧ್ಯಕ್ಷರೇ, ಆಡಳಿತಾಧಿಕಾರಿಗಳು ಅವರ ಕೈಗೆ ಈ ಆಡಳಿತವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಮೈಸೂರು ಸಿಟಿ ಮುನಿಸಿಪಾಲಿಟಿಯು ಸಾಲ ಏನಾದರೂ ಇತ್ತೇ ? ಒಂದುವೇಳೆ ಸಾಲ ಇದ್ದಿದ್ದರೆ ಎಷ್ಟಿತ್ತು ? ಅಲ್ಲಿಂದೀಚೆಗೆ ಮೈಸೂರು ಸಿಟಿ ಮುನಿಸಿಪಾಲಿಟಿಯ ಆಡಳಿತಾಧಿಕಾರಿಗಳ ಸ್ವಾಧೀನಕ್ಕೆ ಬಂದಮೇಲೆ ಎಷ್ಟು ಸಾಲ ಉಳಿಕೆಯಾಯಿತು ? ಯಾವ ಬಾಬಿನಿಂದ ಉಳಿಕೆಯಾಯಿತು ? ನೀರಿನ ಕಂದಾಯ ವಸೂಲ್ಮಾಡದೆ ಸಾಲ ಉಳಿಕೆ ಆಯಿತೇ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಒಟ್ಟು ೧೯೮೮ ರವರೆಗೆ ನೀರಿನ ಬಾಬ್ತು ಮಂಡಳಿಗೆ ಕೊಡಬೇಕಾದುದು ಸುಮಾರು ೮.೨೮ ಕೋಟಿ ರೂಪಾಯಿಗಳು. ಇದರಲ್ಲಿ ಆಡಳಿತಾಧಿಕಾರಿಗಳು ೧೯೭೪–೭೫ ರಿಂದ ೧೯೮೩–೮೪ ರವರೆಗೆ ೩.೧೩ ಕೋಟಿ ರೂಪಾಯಿಗಳನ್ನು ತೀರಿಸಿದ್ದಾರೆ. ಆದಾದಮೇಲೆ ಆಯ್ಕೆಯಾದ ಸಮಿತಿಯೂ ೨.೨ ಕೋಟಿ ರೂಪಾಯಿಗಳನ್ನು ತೀರಿಸಿದೆ. ಇದೂ ಅಲ್ಲದೆ ಇನ್ನೂ ೩೯ ಲಕ್ಷ ರೂಪಾಯಿಗಳನ್ನು ನಗರ ಪಾಲಿಕೆಯು ಕೊಡಬೇಕಾದ್ದು ಇದೆ. ಇದರಲ್ಲಿ ಒಂದು ಏನೆಂದರೆ ಮೈಸೂರು ನಗರದ ನೀರಿನ ದರವನ್ನು ತೆಗೆದುಕೊಂಡರೆ ಇಡೀ ದೇಶದಲ್ಲಿ ಯಾವುದೇ ನಗರಕ್ಕೆ ಹೋಲಿಕೆ ಮಾಡಿದರೂ ಇದು ಅತ್ಯಂತ ಕಡಿಮೆ.

ನಾವು ಬಂದ ಮೇಲೆ ಒಂದು ಆರು ತಿಂಗಳುಗಳಲ್ಲಿಯೇ ಪರಿಷ್ಕರಣ ಮಾಡಿ ಒಂದು ದರವನ್ನು ಹಾಕಿದ್ದೇವೆ ಇದರಿಂದ ಮುಂದಿನ ವರ್ಷದಿಂದ ಅವರ ಅಂದಾಜು ಸುಮಾರು ೨ ಕೋಟಿ ೩೦ ಲಕ್ಷ ರೂಪಾಯಿಗಳಷ್ಟು ಬರುವುದಕ್ಕೆ ಆಗುತ್ತದೆ. ಇದುವರೆಗೆ ಪರಿಷ್ಕರಣ ಮಾಡದಿರುವುದಕ್ಕೆ ಕಾರಣ ವೇನೆಂದರೆ ಆಡಳಿತಾಧಿಕಾರಿ ಇದ್ದಾಗಲೂ ಮಾಡಲಿಲ್ಲ. ಐದು ವರ್ಷಗಳಲ್ಲಿ ಆಯ್ಕೆ ಸಮಿತಿ ಬಂದ ಮೇಲೆ ಎರಡು ವರ್ಷಗಳಿಂದ ಪ್ರಾರಂಭ ಮಾಡಿದ್ದಾರೆ. ಹಿಂದೆ ಆಡಳಿತಾಧಿಕಾರಿಗಳ ಕಾಲದಲ್ಲಿ ೧೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಪರಿಷ್ಕರಣ ಮಾಡದೆ ನಾಗರೀಕರಿಂದ ಹಣವನ್ನು ವಸೂಲು ಮಾಡದಿರುವುದು ಇಲ್ಲಿ ವ್ಯಕ್ತವಾಗುತ್ತದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.— ಮಾನ್ಯ ಅಧ್ಯಕ್ಷರೇ, ನೀರು, ಕಂದಾಯ ಆಡಳಿತಾಧಿಕಾರಿಯವರು ಇದ್ದಾಗ ವಸೂಲು ಮಾಡಲಿಲ್ಲ ? ಇದು ನಿಜವೇ ಸುಳ್ಳೇ ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಎರಡನೆಯದಾಗಿ ಆಡಳಿತಾಧಿಕಾರಿಗಳು ಬರುವುದಕ್ಕೆ ಮೊದಲು ಏನಾದರೂ ಸಾಲ ಇತ್ತೇ ಏನ್ನುವ ಪ್ರಶ್ನೆಗೂ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಎರಡಕ್ಕೂ ಸರಿಯಾದ ಉತ್ತರವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೆ, ೧೯೭೪–೭೫ಕ್ಕೆ ಮುಂಡಲಿ ಬಂದಿದೆ. ಆಡಳಿತಾಧಿಕಾರಿಗಳ ಒಂದು ಆಡಳಿತ ಪ್ರಾರಂಭವಾದುದು ಅಲ್ಲಿಂದಲೇ. ಆದ್ದರಿಂದ ಹಿಂದಿನ ಮಾಹಿತಿ ನನ್ನಲ್ಲಿ ಇಲ್ಲ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

ಆದಾಯ ದೃಢೀಕರಣ ಪತ್ರ

೧೯೭೩. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಡ್ಕೋ ಮನೆಗಳನ್ನು ಮಂಜೂರು ಮಾಡುವಾಗ ಆದಾಯ ದೃಢೀಕರಣ ಪತ್ರ ೨೦೦೦ ರೂ. ಇರಬೇಕಾಗಿರುವುದು ನಿಜವೇ ?

ಅ) ಕನಿಷ್ಟ ದಿನಗೂಲಿ ರೂ. ೯-೮೦ ಪ್ರಕಾರ ವಾರ್ಷಿಕ ವರಮಾನ ರೂ. ೩೭೨೦ ಆಗುವುದು ನಿಜವೇ ?

ಇ) ವಾರ್ಷಿಕ ವರಮಾನ ರೂ. ೨೦೦೦ ಆಡಿಯಲ್ಲಿ ಬರುವವರು ಯಾರ್ಯಾರು (ವಿವರ ನೀಡುವುದು.)

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ಪಸತಿ ರಾಜ್ಯ ಸಚಿವರು).—

ಅ) ನಿಜ.

ಆ) ಕನಿಷ್ಟ ದಿನಗೂಲಿ ರೂ. ೯-೮೦ ಪ್ರಕಾರ ೩೬೫ ದಿನಗಳ ವಾರ್ಷಿಕ ವರಮಾನವು ರೂ. ೩೫೭೭-೦೦ ಆಗುವುದು.

ಇ) ವಾರ್ಷಿಕ ಆದಾಯ ೨೦೦೦ ರೂ. ಗಿಂತ ಕಡಿಮೆ ವರಮಾನವಿರುವ ಎಲ್ಲಾ ದುರ್ಬಲ ವರ್ಗದವರು ಈ ವರಮಾನದ ಆಡಿಯಲ್ಲಿ ಬರುತ್ತಾರೆ.

ಶ್ರೀ ಬಿ. ಸ್ವಾಮಿರಾವ್.— ಹಂಡೋ ಮನೆಗಳನ್ನು ಪಡೆಯತಕ್ಕಂಥ ಜನ ಯಾವ ಉದ್ಯೋಗ ಮಾಡುತ್ತಿರಬೇಕು ? ಯಾವುದೇ ಉದ್ಯೋಗದಲ್ಲಿದ್ದರೂ ಸುಳ್ಳು ಲೆಕ್ಕಪತ್ರ ಕೊಟ್ಟು ಮನೆಗಳನ್ನು ಪಡೆಯಬೇಕೇ ಎಂದು ಕೇಳುತ್ತೇನೆ.

ಶ್ರೀ ಮಹಮೊದ್ ಮೊಯಿದ್ದೀನ್.— ಕನಿಷ್ಟ ದಿನಗೂಲಿ ೯-೮೦ ಪೈಸೆ ಪ್ರಕಾರ ೩೬೫ದಿನಗಳಿಗೆ ೩೫೭೭ ರೂಪಾಯಿಗಳಾಗುತ್ತದೆ. ಅವರು ೩೬೫ ದಿವಸಗಳು ಕೆಲಸ ಮಾಡುವುದಿಲ್ಲ. ಕನಿಷ್ಟ ಪಕ್ಷ ೧೮೦-೨೦೦ ದಿನಗಳು ಕೆಲಸ ಮಾಡುತ್ತಾರೆ, ಇದನ್ನು ಲೆಕ್ಕ ಹಾಕಿದರೆ ೧೯೦೦ ರೂಪಾಯಿಗಳು ವರಮಾನವಾಗುವುದಿಲ್ಲ. ಆದಕ್ಕೋಸ್ಕರವಾಗಿ ದಿನಗೂಲಿಗಳು ದುರ್ಬಲವರ್ಗದಲ್ಲಿ ಬರುತ್ತಾರೆ. ಆದ್ದರಿಂದ ಅವರು ಮನೆಗಳನ್ನು ತೆಗೆದುಕೊಳ್ಳಲು ಅರ್ಹರಾಗಿರುತ್ತಾರೆ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಮಂತ್ರಿಗಳಿಗೆ ಅವರು ೩೬೫ ದಿನಗಳು ಕೆಲಸ ಮಾಡುವುದಿಲ್ಲವೆಂದು ಯಾರಿಂದ ಲೆಟರ್ ಬಂದಿರುತ್ತದೋ ಗೊತ್ತಿಲ್ಲ. ಮತ್ತೆ ೨ ಸಾವಿರ ರೂಪಾಯಿಗಳ ವರಮಾನ ಇದ್ದವರಿಗೆ ಈ ಮನೆಗಳು ಸಿಕ್ಕುವುದಾದರೆ ಅವರು ಸುಳ್ಳು ದಾಖಲೆ ಕೊಡುವುದಕ್ಕೆ ಪ್ರಚೋದನೆ ಮಾಡಿದಂತಾಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.— ೩೬೦ ದಿವಸ ಕೆಲಸ ಮಾಡುತ್ತಿದ್ದಾರೆಂದರೂ ಸಹ ೨ ಸಾವಿರಕ್ಕೆ ಏರುವುದಿಲ್ಲ. ಎರಡುಸಾವಿರ ಪ್ರಮಾಣವನ್ನು ಗೌವರ್ಮೆಂಟ್ ಆಫ್ ಇಂಡಿಯಾದವರಿಗೆ ೩೬೦ ರೂಪಾಯಿ ವರಮಾನ ನಿಗದಿ ಮಾಡಿ ಎಂದು ಬರೆದಿದ್ದೇವೆ.

ಶ್ರೀ ಪಟಮಕ್ಕಿ ರತ್ನಾಕರ್.— ಮಾನ್ಯ ಸಚಿವರು ಮಾನ್ಯ ಸದಸ್ಯರಾದ ಸ್ವಾಮಿ ರಾವ್‌ರವರ ಪ್ರಶ್ನೆಯನ್ನು ಅರ್ಥ ಮಾಡಿಕೊಂಡಹಾಗೆ ಕಾಣಲಿಲ್ಲ. ಕನಿಷ್ಟ ದಿನಗೂಲಿ ಪ್ರಕಾರ ೩೬೫ ದಿವಸಗಳಿಗೆ ಲೆಕ್ಕಹಾಕಿದರೂ ಕೂಡ ೨೬೨೦ ರೂಪಾಯಿಗಳ ಮೇಲೆ ಆಗುತ್ತದೆ. ಆದ್ದರಿಂದ ಸಂಬಂಧಪಟ್ಟ ವಿಲೇಜ್ ಅಕೌಂಟೆಂಟ್ ವರಮಾನ ಪತ್ರವನ್ನು ಎರಡೂವರೆ ಸಾವಿರಕ್ಕೂ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿ ಅವರ ಶೋಷಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾನೆ, ಆದ್ದರಿಂದ ದುರ್ಬಲ ವರ್ಗದವರಿಗೆ ಎರಡು ಸಾವಿರ ಮಿತಿ ಇರುವುದರಿಂದ ವರಮಾನ ಪತ್ರವನ್ನು ಪಡೆಯಲು ತೊಂದರೆ ಯಾಗುತ್ತದೆ ಹಣವನ್ನು ಕೇಳುತ್ತಾನೆ. ಆದ್ದರಿಂದ ಎಲ್ಲ ದುರ್ಬಲ ವರ್ಗದವರಿಗೂ ಅನುಕೂಲವಾಗಲು ಕನಿಷ್ಟ ವರಮಾನವನ್ನು ೩೫೦೦ ರೂಪಾಯಿಗಳಿಗೆ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮೊಹಮದ್ ಮೊಯಿನುದ್ದೀನ್ — ೩ ಸಾವಿರ ರೂಪಾಯಿಗಳನ್ನು ನಿಗದಿ ಮಾಡುವುದ ಕೇಂದ್ರ ಸರ್ಕಾರ ಎಂದು ಈಗಾಗಲೇ ಹೇಳಿದ್ದೇನೆ. ನಾವು ಅವರಿಗೆ ಬರೆದಿದ್ದೇವೆ. ಅದನ್ನು ಮಾಡಿ ಎಂದು. ಅವರಿಂದ ಆದೇಶ ಬಂದ ತಕ್ಷಣ ಹೊಸ ಸರ್ಕಾರಿ ಆಜ್ಞೆಯನ್ನು ಜಾರಿಗೆ ತರುತ್ತೇವೆ.